# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 301 |
| ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್ |
| ಉತ್ತರಿಸುವ ದಿನಾಂಕ | 15.02.2023 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಜಿಲ್ಲೆಯಲ್ಲಿರುವ ಎಷ್ಟು ದೇವಸ್ಥಾನಗಳಿಗೆ ಕಳೆದ 2 ವರ್ಷಗಳಲ್ಲಿ ಅನುದಾನ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಧಾರ್ಮಿಕ ದತ್ತಿ ಇಲಾಖೆಯ ವಿವಿಧ ಯೋಜನೆಗಳಡಿ ಬೆಂಗಳೂರು ನಗರ ಜಿಲ್ಲೆಗೆ ಕಳೆದ 2 ವರ್ಷಗಳಲ್ಲಿ 26 ದೇವಾಲಯಗಳಿಗೆ ರೂ.890.66 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ವಿವರ ಈ ಕೆಳಕಂಡಂತಿದೆ.<br><br>ಇದಲ್ಲದೇ, ಆರಾಧನಾ, ಪರಿಶಿಷ್ಟ ಜಾತಿ ಉಪಯೋಜನ ಮತ್ತು ಗಿರಿಜನ ಉಪಯೋಜನ ಅಡಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ರೂ.ಲಕ್ಷಗಳಲ್ಲಿ
<table>
<tr><th>ಯೋಜನೆ</th><th>2020-21</th><th>2021-22</th><th>ಒಟ್ಟು</th></tr>
<tr><td>ದುರಸ್ಥಿ/ಜೀರ್ಣೋದ್ಧಾರ/ನಿರ್ಮಾಣ</td><td>288.00</td><td>78.00</td><td>366.00</td></tr>
<tr><td>ಆರಾಧನಾ ಯೋಜನೆ</td><td>92.40</td><td>92.40</td><td>184.80</td></tr>
<tr><td>ಪರಿಶಿಷ್ಟ ಜಾತಿ ಉಪಯೋಜನೆ</td><td>147.84</td><td>147.84</td><td>295.68</td></tr>
<tr><td>ಗಿರಿಜನ ಉಪ ಯೋಜನೆ</td><td>22.12</td><td>22.06</td><td>44.18</td></tr>
<tr><td>ಒಟ್ಟು</td><td>550.36</td><td>340.30</td><td>890.66</td></tr>
</table></td></tr>
<tr><td>ಆ)</td><td>ಎಷ್ಟು ದೇವಸ್ಥಾನಗಳಿಗೆ ಅನುದಾನ ನೀಡಲು ಬಾಕಿ ಉಳಿದಿರುತ್ತದೆ; ಅವುಗಳಿಗೆ ಯಾವಾಗ ಅನುದಾನ ನೀಡಲಾಗುವುದು;</td><td>ಮೇಲ್ಕಂಡಂತೆ ಬಿಡುಗಡೆಯಾಗಿರುವ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಅನುದಾನ ಬಿಡುಗಡೆಗೆ ಬಾಕಿ ಇರುವುದಿಲ್ಲ.</td></tr>
<tr><td>ಇ)</td><td>ಹಲವಾರು ದೇವಸ್ಥಾನಗಳ ಆಡಳಿತ ಮಂಡಳಿಯವರು ಹಲವಾರು ವರ್ಷಗಳಿಂದ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸುತ್ತಿದ್ದು, ಹೆಚ್ಚಿನ ಅನುದಾನವನ್ನು ಪ್ರಸಕ್ತ ಸಾಲಿನಲ್ಲಾದರೂ ಮಂಜೂರು ಮಾಡಲಾಗುವುದೇ;</td><td>ದೇವಾಲಯಗಳ ಆಡಳಿತ ಮಂಡಳಿಯವರು ಅನುದಾನ ಕೋರಿ ಸಲ್ಲಿಸುವ ಬೇಡಿಕೆಗಳ ಬಗ್ಗೆ, ಆಯವ್ಯಯದನ್ವಯ ಮಂಜೂರಾಗಿರುವ ಅನುದಾನವನ್ನು ಬೇಡಿಕೆ ಹಾಗೂ ಅಗತ್ಯತೆಗನುಗುಣವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಜಿಲ್ಲಾವಾರು ಅನುದಾನದ ಆದೇಶ ಮಾಡಿ ಬಿಡುಗಡೆ ಮಾಡಲಾಗುತ್ತಿದೆ.</td></tr>
</table>

ಸಂಖ್ಯೆ: ಕಂಇ 22 ಮುಸಪ್ರ 2023

(ಶಶಿಕಲಾ. ಅ.ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು